**ಸಿಸಿ ನಂಃ 2325/2025**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ19-02-2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ-ಆರೋಪಿ ಪರ ವಕೀಲರಾದ ಶ್ರೀ ಎನ್.ಎಂ.ಎಂ ರವರಿಂದಃ**

ಆರೋಪಿಗೆ ಎಷ್ಟನೇ ಇಸವಿಯಲ್ಲಿ ಸಾಲ ಕೊಟ್ಟಿದ್ದೀರಿ ಎಂದರೆ ಸಾಕ್ಷಿ 2020ರಲ್ಲಿ ಸಾಲ ಕೊಟ್ಟಿದ್ದೆವು ಅಂತಾ ಉತ್ತರಿಸುತ್ತಾರೆ. ನೀವು ಫಿರ್ಯಾದುದಾರ ಸಂಘದಲ್ಲಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ 14 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ ಅಂತಾ ಉತ್ತರಿಸುತ್ತಾರೆ. ನೀವು ಫಿರ್ಯಾದುದಾರ ಸಂಘದಲ್ಲಿ ಸೇವೆಗೆ ಸೇರಿರುವುದು ಎಷ್ಟನೇ ಇಸವಿಯಲ್ಲಿ ಎಂದರೆ ಸಾಕ್ಷಿ 2012ರಲ್ಲಿ ಅಂತಾ ಉತ್ತರಿಸುತ್ತಾರೆ. ನೀವು ಸೇವೆಗೆ ಸೇರುವಾಗ ಇದ್ದ ಆಡಳಿತ ಮಂಡಳಿ ಎಲ್ಲಿಯವರೆಗೆ ಊರ್ಜಿತದಲ್ಲಿತ್ತು ಎಂದರೆ ಸಾಕ್ಷಿ 5 ವರ್ಷಗಳಿಗೊಮ್ಮೆ ಆಡಳಿತ ಮಂಡಳಿಯ ಚುನಾವಣೆ ನಡೆಯುತ್ತಿದ್ದು ನಿಖರವಾಗಿ ಎಲ್ಲಿಯವರೆಗೆ ನಾನು ಸೇರುವಾಗ ಇದ್ದ ಆಡಳಿತ ಮಂಡಳಿ ಇತ್ತು ಎಂಬುದನ್ನು ಹೇಳಲು ಆಗುವುದಿಲ್ಲ ಅಂತಾ ಸಾಕ್ಷಿ ಉತ್ತರಿಸುತ್ತಾರೆ.

2. ನಿಮ್ಮ ಸಂಘದಲ್ಲಿ ಸಾರ್ವಜನಿಕರ ಹಣ ದುರುಪಯೋಗ ಆಗಿದೆ ಅಂತಾ ಆಪಾದಿಸಿ ನಿಮ್ಮ ಸಂಘದ ವಿರುದ್ಧ ಪ್ರಕರಣ ದಾಖಲಾಗಿತ್ತು ಎಂದರೆ ಸುಳ್ಳು. ನಿಮ್ಮ ಸಂಘದ ವಿರುದ್ಧ ಸಲ್ಲಿಸಿರುವ ಪ್ರಕರಣ COD ತನಿಖೆ ಆಗಿತ್ತು ಎಂದರೆ ಸಾಕ್ಷಿ ಅದು ಸಂಘಸಿದ ವಿರುದ್ಧ ಅಲ್ಲ, ಸಂಘದ ಆಡಳಿತ ಮಂಡಳಿಯವರು ಮ್ಯಾನೇಜರರವರ ವಿರುದ್ಧ ಮಾಡಿದ್ದ ಪ್ರಕರಣ COD ತನಿಖೆಯಲ್ಲಿ ಬಾಕಿ ಇದೆ ಅಂತಾ ಉತ್ತರಿಸುತ್ತಾರೆ. ಆ ಮ್ಯಾನೇಜರ್ ಎಷ್ಟನೇ ಇಸವಿಯಿಂದ ಎಷ್ಟನೇ ಇಸವಿಯವರೆಗೆ ನಿಮ್ಮ ಸಂಘದಲ್ಲಿ ಇದ್ದರು ಎಂದರೆ ಸಾಕ್ಷಿ ನಾನು ಸೇರುವ ಸುಮಾರು ಮಾದಲಿನಿಂದಲೂ ಸಂಘದಲ್ಲಿ ಇದ್ದರು ಅಂತಾ ಉತ್ತರಿಸುತ್ತಾರೆ. ಅವರು ಈಗ ಸಂಘದಲ್ಲಿ ಮ್ಯಾನೇಜರ್ ಆಗಿ ಇರುವುದಿಲ್ಲ. ಅವರು 2023ರ ಮಾರ್ಚ್ ತಿಂಗಳಿನಿಂದ ಅಮಾನತ್ತಿನಲ್ಲಿದ್ದಾರೆ ಅಂತಾ ಉತ್ತರಿಸುತ್ತಾರೆ. COD ತನಿಖೆಯು ಮ್ಯಾನೇಜರ್ ವಿರುದ್ಧ ಮತ್ತು ಸಂಘದ ಅಧ್ಯಕ್ಷರ ವಿರುದ್ಧ 2021ರ ಅಕ್ಟೋಬರ್ ನಿಂದ ಪ್ರಾರಂಭವಾಯಿತು ಎಂದರೆ ಸುಳ್ಳು. ನನ್ನ ಪ್ರಕಾರ 2024 ರಿಂದ ತನಿಖೆ ಶುರುವಾಗಿರುತ್ತದೆ ಅಂತಾ ಉತ್ತರಿಸುತ್ತಾರೆ.

**ಸಿಸಿ ನಂಃ 2325/2025**

**ಪಿ. ಡಬ್ಲ್ಯು 1**

3. ಸಂಘದ ವ್ಯವಹಾರಕ್ಕೆ ಸಂಬಂಧಿಸಿದ ಕಡತವನ್ನು ನಿಮ್ಮ ಸಂಘದವರು ನಿರ್ವಹಿಸುತ್ತಾರಲ್ಲವೇ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. 2020 ರಿಂದ 2024 ರವರೆಗಿನ ಸಂಘದಲ್ಲಿನ ಠರಾವು ಪುಸ್ತಕ ಮತ್ತು ಅಕೌಂಟ ಸ್ಟೇಟಮೆಂಟು ಹಾಜರುಪಡಿಸಬಹುದೇ ಎಂದರೆ ಸಾಕ್ಷಿ ಅವಶ್ಯಕತೆ ಇದ್ದರೆ ಹಾಜರುಪಡಿಸಬಹುದು ಅಂತಾ ಉತ್ತರಿಸುತ್ತಾರೆ. COD ತನಿಖೆಯಲ್ಲಿ ನಿಮ್ಮ ಸಂಘದ ಎಲ್ಲಾ ದಾಖಲಾತಿಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ಪ್ರಸ್ತುತ ಆಡಳಿತ ಮಂಡಳಿಯು 2024 ರ ಡಿಸೆಂಬರ್ ನಿಂದ ಕಾರ್ಯಾಚರಿಸುತ್ತಿದೆ. 2024 ರ ಡಿಸೆಂಬರ್ ಪೂರ್ವದಲ್ಲಿ ಸಂಘಕ್ಕೆ ಬೇರೆ ಆಡಳಿತ ಮಂಡಳಿ ಇತ್ತಾ ಎಂದರೆ ಸಾಕ್ಷಿ ಆಡಳಿತಾಧಿಕಾರಿಯವರನ್ನು ನೇಮಿಸಲಾಗಿತ್ತು ಅಂತಾ ಉತ್ತರಿಸುತ್ತಾರೆ. ಅವರು ಎಷ್ಟು ಅವಧಿಯಲ್ಲಿ ಇದ್ದರು ಎಂದರೆ ಸಾಕ್ಷಿ ಸುಮಾರು 8 ತಿಂಗಳುಗಳ ಕಾಲ ಆಡಳಿತಾಧಿಕಾರಿಯಾಗಿ ಇದ್ದರು ಅಂತಾ ಉತ್ತರಿಸುತ್ತಾರೆ. ಡಿಸೆಂಬರ್ 2024 ರಿಂದ 8 ತಿಂಗಳ ಹಿಂದಿನಿಂದ ಆಡಳಿತಾಧಿಕಾರಿಯವರು ಕಾರ್ಯಾಚರಿಸುತ್ತಿದ್ದರು. ಸದ್ರಿ ಅವಧಿಯಲ್ಲಿ ಫಿರ್ಯಾದುದಾರ ಸಂಘಕ್ಕೆ ಆಡಳಿತ ಮಂಡಳಿ ಇರಲಿಲ್ಲ ಎಂದರೆ ಸರಿ. ಈ ಪ್ರಕರಣವನ್ನು ದಾಖಲು ಮಾಡುವಾಗ ಯಾವ ಸಮಿತಿ ಅಸ್ತಿತ್ವದಲ್ಲಿತ್ತು ಎಂದರೆ ಸಾಕ್ಷಿ ಸಂಘದ ಹಳೆಯ ಕಮಿಟಿ ಅಸ್ತಿತ್ವದಲ್ಲಿತ್ತು ಅಂತಾ ಉತ್ತರಿಸುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ನೀಡಿ ಮುಂದೂಡಲಾಗಿದೆ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕಾರವಾರ.**